# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 243 |
| 02. ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. ಉತ್ತರಿಸುವ ದಿನಾಂಕ | : | 17.02.2022 |
| 04. ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪೊಲೀಸ್ (ಪೇದೆಗಳಿಗೆ) ಸಿಬ್ಬಂದಿಗೆ ಈಗಿನ ಕ್ಯಾಪ್ ಬದಲು ಪಿ. ಕ್ಯಾಪ್ ಕೊಡುವಂತೆ ಇಲಾಖೆಯ ಸಿಬ್ಬಂದಿಯವರು ಅನೇಕ ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ನಿರ್ಣಯ ತೆಗೆದುಕೊಂಡಿದೆ: (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br><br>ರಾಜ್ಯದಲ್ಲಿರುವ ಪೊಲೀಸ್ ಸಿಬ್ಬಂದಿಗಳಿಗೆ ಕವಾಯತು ಮಾಡಲು, ಮಳೆ, ಬಿಸಿಲಿನಿಂದ ರಕ್ಷಣೆ ಹಾಗೂ ಇತರೆ ಕಾರಣಗಳಿಂದ ಪಿ. ಕ್ಯಾಪ್ ಬದಲಿಗೆ ಖಾಕಿ ಸ್ಲೋಚ್ ಹ್ಯಾಟ್‌ಗಳೇ ಸೂಕ್ತವೆಂದು ಪರಿಗಣಿಸಿ ನೀಡಲಾಗಿದೆ. |
| ಆ) | ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ ಅಲ್ಲಿನ ಪೊಲೀಸ್ ಸಿಬ್ಬಂದಿಗೆ ಪಿ.ಕ್ಯಾಪ್ ಯೋಜನೆಯನ್ನು ಜಾರಿಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ ಆ ರಾಜ್ಯಗಳು ಯಾವುವು; ಯಾವ ರೀತಿಯಲ್ಲಿ ಯೋಜನೆ ರೂಪಿಸಲಾಗಿದೆ; (ವಿವರ ನೀಡುವುದು) | ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ಹಾಗೂ ಇತರೆ ರಾಜ್ಯಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಪಿ.ಕ್ಯಾಪ್‌ಗಳನ್ನು ವಿತರಿಸಲಾಗುತ್ತಿದೆ. |
| ಈ) | ಹಾಲಿ ಇರುವ ಕ್ಯಾಪ್‌ಗಳ ತೂಕ ಹೆಚ್ಚಾಗಿದ್ದು, ಜೊತೆಗೆ ಆರೋಗ್ಯ ಸಮಸ್ಯೆ ಇರುವುದರಿಂದ ಈ ಪಿ.ಕ್ಯಾಪ್ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಸ್ಪಷ್ಟ ನಿರ್ಧಾರ ಪ್ರಕಟಿಸುವುದೇ? (ವಿವರ ನೀಡುವುದು) | ಪೊಲೀಸ್ ಸಿಬ್ಬಂದಿಗಳು ಧರಿಸುತ್ತಿರುವ ಖಾಕಿ ಸ್ಲೋಚ್ ಹ್ಯಾಟ್‌ಗಳ ತೂಕ 150-170 ಗ್ರಾಂ ಆಗಿರುತ್ತದೆ. ಆದರೆ, ಪಿ. ಕ್ಯಾಪ್‌ನ ತೂಕ 250 ಗ್ರಾಂಗಳಿಗೂ ಮೇಲ್ಪಟ್ಟಿರುತ್ತದೆ.<br>ರಾಜ್ಯದ ಪೊಲೀಸ್ ಸಿಬ್ಬಂದಿ (ಪೇದೆ ಮತ್ತು ಮುಖ್ಯ ಪೇದೆ)ಯವರಿಗೆ ಖಾಕಿ ಸ್ಲೋಚ್ ಹ್ಯಾಟ್‌ಗಳನ್ನು ವಿತರಿಸಲಾಗುತ್ತಿದ್ದು, ಹ್ಯಾಟ್‌ಗಳು ಲಘುವಾಗಿದ್ದು, ಮತ್ತು ಸ್ವಲ್ಪ ಅಗಲವಿರುವ ಕಾರಣ ಮಳೆ ಮತ್ತು ಬಿಸಿಲುಗಾಲ ಹಾಗೂ ಕವಾಯತು ವೇಳೆಯಲ್ಲಿ ತಲೆ ಹಾಗೂ ಮುಖಕ್ಕೆ ಬಿಸಿಲು ಬೀಳದಂತೆ ತಡೆಯುವುದರಿಂದ ಹಾಗೂ ಸಿಬ್ಬಂದಿಗಳು ಕರ್ತವ್ಯದಲ್ಲಿ ಬಹಳಷ್ಟು ಸಮಯ ಧರಿಸಬೇಕಾಗಿದ್ದು, ಧರಿಸಲು ಸಿಬ್ಬಂದಿಗಳಿಗೆ ಬಹಳಷ್ಟು ಅನುಕೂಲಕರವಾಗಿರುವುದರಿಂದ ಖಾಕಿ ಸ್ಲೋಚ್ ಹ್ಯಾಟ್‌ಗಳನ್ನು ಬದಲಾಯಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

HD/20/PPS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು